ಅ) ಕ್ಷೇತ್ರ : 6.19 ಲಕ್ಷ ಹೆಕ್ಟೇರ್

ಉತ್ಪಾದನೆ : 9.35 ಲಕ್ಷ ಬೇಲುಗುಳು

ಆ) 137.06 ಲಕ್ಷ ಕೆ.ಜಿ.

ಇ) 25000 ಕದಿರುಗಳ ಸಾಮರ್ಥ್ಯವುಳ್ಳ 60 ಗಿರಣಿಗಳು ಬೇಕಾಗುತ್ತವೆ. ಪ್ರಸ್ತುತ ಸಹಕಾರಿ ರಂಗದಲ್ಲಿ 25000 ಕದಿರುಗಳ ಸಾಮರ್ಥ್ಯದ 10 ಗಿರಣಿಗಳು ಕಾರ್ಯ ನಿರ್ವಹಿಸುತ್ತವೆ.

ಈ) ಸುಮಾರು ರೂ.12.00 ಕೋಟಿಗಳು.

ಭಟ್ಕಳ ಪುರಸಭೆಯಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಿಲ್ಲದಿರುವುದು

1576 - ಶ್ರೀ ಶಿವಾನಂದ ನಾಯ್ಕ್ (ಭಟ್ಕಳ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಪುರಸಭೆಯು ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪುರಸಭೆಯ ವ್ಯಾಪ್ತಿಯಲ್ಲಿರುವ ಒಳಚರಂಡಿ ವ್ಯವಸ್ಥೆ ಸರಿಯಿಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರಕೂಡಲೇ ಕ್ರಮ ಕೈಗೊಳ್ಳುವುದು ?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಇಲ್ಲ

ಆ) ಒಳಚರಂಡಿ ಯೋಜನೆಯು ಇನ್ನೂ ಪೂರ್ಣಗೊಳಿಸಿರುವುದಿಲ್ಲ. ಇದರಿಂದ ಸಾರ್ವಜನಿಕರಿಗಾಗುವ ತೊಂದರೆಯನ್ನು ಹೋಗಲಾಡಿಸಲು ಅವಶ್ಯಕ ಕ್ರಮ ಜರುಗಿಸಲು ಕರ್ನಾಟಕ ನಗರ ನೀರು ಸರಬರಾಜು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರುರವರೊಂದಿಗೆ ವ್ಯವಹಾರಿಸಲಾಗುತ್ತಿದೆ.

ವಿದೇಶಿ ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಹೂಡುವ ಕುರಿತು

1578 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯಮಂತ್ರಿಯವರ ವಿದೇಶಿ ಭೇಟಿಯಿಂದಾಗಿ ಎಷ್ಟು ಕಂಪನಿಗಳು ತಮ್ಮ ರಾಜ್ಯದಲ್ಲಿ ಬಂಡವಾಳ ಹೂಡಲು ಮುಂದೆ ಬಂದಿವೆ?

ಆ) ಆ ಕಂಪನಿಗಳು ಯಾವುವು?